# ರಾಮಕೃಷ್ಣ ಸುದ್ದಿ ಸಂಚಯ

ESTD : 1994

SERVICE AND SAFETY

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com    Email : ho@ramakrishnacredit.com

ಸಂಪುಟ : 1    ಸಂಚಿಕೆ : 3    ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ    ಅಕ್ಟೋಬರ್-ಡಿಸೆಂಬರ್ 2015


## ಅಧ್ಯಕ್ಷರ ಮಾತು



ನಮ್ಮ ಎಲ್ಲಾ ನಿರ್ದೇಶಕರುಗಳಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರುಗಳಿಗೆ ಹಾಗೂ ಸಲಹಾ ಸಮಿತಿ ಸದಸ್ಯರುಗಳಿಗೆ, ಶಾಖಾಧಿಕಾರಿಗಳಿಗೆ ಮತ್ತು ಎಲ್ಲಾ ಸಿಬ್ಬಂದಿ ಗಳಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

2016ನೇ ಸಾಲಿನಲ್ಲಿ ನಮ್ಮ ಸಂಘವು ಸರ್ವತೋಮುಖ ಪ್ರಗತಿಯನ್ನು ಸಾಧಿಸಿ, ಸದಸ್ಯರು ನಮ್ಮ ಮೇಲೆ ಇಟ್ಟ ಭರವಸೆಯನ್ನು ಈಡೇರಿಸುವ ಶಕ್ತಿಯು ಶ್ರೀ ದೇವರು ನಮಗೆ ನೀಡಲೆಂದು ಪ್ರಾರ್ಥಿಸುತ್ತೇವೆ.

31.12.2015ಕ್ಕೆ ಅಂತ್ಯಗೊಂಡ 2015-16ನೇ ಸಾಲಿನ ಮೂರನೇ ತ್ರೈಮಾಸಿಕ ಅವಧಿಯಲ್ಲಿ, ಸಂಘವು ತನ್ನೆಲ್ಲಾ ಕಾರ್ಯ ಚಟುವಟಿಕೆಯಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದೆ ಎಂದು ತಿಳಿಸಲು ತುಂಬಾ ಸಂತೋಷವಾಗುತ್ತಿದೆ.

ಠೇವಣಾತಿಯು ರೂ.124.42 ಕೋಟಿ, ಸಾಲ/ಮುಂಗಡ ರೂ.87.68 ಕೋಟಿ, ನಿವ್ವಳ ಲಾಭ ರೂ. 2.20 ಕೋಟಿ ಮೀರಿ, ಒಟ್ಟಾರೆ ಅನುತ್ಪಾದಕ ಆಸ್ತಿ ಕೇವಲ ರೂ.24.60 ಲಕ್ಷ ಹಾಗೂ ನಿವ್ವಳ ಅನುತ್ಪಾದಕ ಆಸ್ತಿ 0% ಪ್ರಮಾಣದಲ್ಲಿದ್ದು, ಎಲ್ಲಾ ವಿಭಾಗದಲ್ಲೂ ಗಣನೀಯ ಪ್ರಗತಿಯನ್ನು ಸಾಧಿಸಿದೆ. ಇದಕ್ಕೆ ಕಾರಣ ಕರ್ತರಾದ ತಮ್ಮೆಲ್ಲರಿಗೂ ನನ್ನ ಹಾರ್ದಿಕ ಅಭಿನಂದನೆಗಳು.

ವರ್ಷಾಂತ್ಯ 31.03.2016ಕ್ಕೆ ಕೂಡ ನಮ್ಮ ಸಂಘವು ನಿಗದಿಪಡಿಸಿಕೊಂಡ ಎಲ್ಲಾ ಗುರಿಗಳನ್ನು ಸಾಧಿಸಿ, ಉತ್ತಮ ಪ್ರಗತಿಯನ್ನು ಕಾಣುವಂತಾಗಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

## ಅರ್ಧ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ




ದಿನಾಂಕ 27.10.2015 ರಂದು ಜರಗಿದ ಶಾಖಾಧಿಕಾರಿಗಳ ಸಭೆಯಲ್ಲಿ 2015-16ನೇ ಸಾಲಿನ 30.09.2015ರ ವರೆಗಿನ, ಅರ್ಧವಾರ್ಷಿಕ ಅವಧಿಯ ಪ್ರಗತಿಯನ್ನು ಪರಿಶೀಲನೆ ನಡೆಸಲಾಯಿತು.

ಸಭೆಯನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಯವರು ಈ ಸಂದರ್ಭದಲ್ಲಿ ಮಾತನಾಡಿ, 2015-16ರ ಅರ್ಧವಾರ್ಷಿಕ ಅವಧಿ ಯಲ್ಲಿ ಸಂಘವು ದಾಖಲಿಸಿದ ಪ್ರಗತಿಗೆ ತೃಪ್ತಿ ವ್ಯಕ್ತಪಡಿಸಿ, ಈ ಅವಧಿಯಲ್ಲಿ ನಿಗದಿತ ಗುರಿ ಸಾಧನೆಯಲ್ಲಿ ಉತ್ತಮ ನಿರ್ವಹಣೆ ತೋರಿಸಿದ ವಿಟ್ಲ ಮತ್ತು ವೇಲೆನ್ಸಿಯಾ ಶಾಖೆಗಳನ್ನು ಅಭಿನಂದಿಸಿದರು.

ಶಾಖೆಗಳ ಪ್ರಗತಿ ಪರಿಶೀಲನೆ ನಡೆಸಿಕೊಟ್ಟ ಅಧ್ಯಕ್ಷರು ಮುಂದಿನ ಅವಧಿಯಲ್ಲಿ ಶಾಖೆಗಳು ನಿಗದಿತ ಗುರಿಯನ್ನು ಸಾಧಿಸಲು ಬೇಕಾದ ಕಾರ್ಯತಂತ್ರಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿ, ಸಂಘದ ವಿವಿಧ ಸಾಲ ಸೌಲಭ್ಯಗಳ ಬಗ್ಗೆ, ಪ್ರಚಾರ ನೀಡಲು ಕ್ರಮವಿಟ್ಟು, ಮುಂದಿನ ಅವಧಿಯಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಲು ಶಾಖಾಧಿಕಾರಿಗಳಿಗೆ ಕರೆ ನೀಡಿದರು. ಶಾಖೆಗಳ ಭದ್ರತಾ ವ್ಯವಸ್ಥೆ ಬಗ್ಗೆ ಮುಂಜಾಗ್ರತೆಗಳನ್ನು ವಹಿಸಿಕೊಳ್ಳಲು ತಿಳಿಸಿದರು.

ಸಭೆಯಲ್ಲಿ ಸಂಘದ ಎಲ್ಲಾ 16 ಶಾಖೆಗಳ ಶಾಖಾಧಿಕಾರಿಗಳು, ಕೇಂದ್ರ ಕಛೇರಿಯ ಮುಖ್ಯ ವ್ಯವಸ್ಥಾಪಕ ಶ್ರೀ ಮೋಹನ್‌ದಾಸ್ ಶೆಟ್ಟಿ ಮತ್ತು ವ್ಯವಸ್ಥಾಪಕರಾದ ಶ್ರೀಮತಿ ಜ್ಯೋತಿಯವರು ಉಪಸ್ಥಿತರಿದ್ದರು, ಕಾರ್ಯಕ್ರಮದ ಕೊನೆಯಲ್ಲಿ ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರು ವಂದಿಸಿದರು.

## ಸಂಘದ ನಿರ್ದೇಶಕರಾಗಿ ಡಾ। ಸುಧಾಕರ ಶೆಟ್ಟಿ ಆಯ್ಕೆ



ಆಕಸ್ಮಿಕ ಕಾರಣಗಳಿಂದ ತೆರವಾಗಿದ್ದ ಸಂಘದ ಒಂದು ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಡಾ। ಸುಧಾಕರ ಶೆಟ್ಟಿಯವರು ಸಂಘದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಹಾಗೂ ಅದರಂತೆ ಇವರನ್ನು ಸಂಘದ ಬಿ ಸಿ.ರೋಡ್ ಶಾಖಾ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಉಸ್ತುವಾರಿ ನಿರ್ದೇಶಕ ಸ್ಥಾನಕೆ, ಆಡಳಿತ ಮಂಡಳಿಯು ನಾಮ ನಿರ್ದೇಶನ ಮಾಡಿದೆ. ಡಾ। ಸುಧಾಕರ ಶೆಟ್ಟಿಯವರಿಗೆ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳು ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

# ಪ್ರಶಸ್ತಿ

## ನಿರ್ದೇಶಕ ಶ್ರೀ ಕೆ. ಸೀತಾರಾಮ ರೈ ಸವಣೂರುರವರಿಗೆ ಪ್ರಶಸ್ತಿ



ಸುಳ್ಯದಲ್ಲಿ ಜರಗಿದ 'ಕೆ.ವಿ.ಜಿ ಸುಳ್ಯ ಹಬ್ಬ'ದ ಸಂದರ್ಭದಲ್ಲಿ, ಸಂಘದ ನಿರ್ದೇಶಕರಾದ ಶ್ರೀ ಕೆ. ಸೀತಾರಾಮ ರೈ ಸವಣೂರು ರವರಿಗೆ 'ಕೆ.ವಿ.ಜಿ. ಸಾಧನಾ ಪ್ರಶಸ್ತಿ'ಯನ್ನು ನೀಡಿ ಗೌರವಿಸ ಲಾಯಿತು. ಶ್ರೀ ಕೆ. ಸೀತಾರಾಮ ರೈ ಸವಣೂರುರವರಿಗೆ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಮತ್ತು ಆಡಳಿತ ಮಂಡಳಿ ನಿರ್ದೇಶಕರುಗಳು ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

## ನಿರ್ದೇಶಕ ಡಾ. ಕೆ. ಸುಭಾಶ್ಚಂದ್ರ ಶೆಟ್ಟಿಯವರಿಗೆ ಸನ್ಮಾನ



ವೈದ್ಯರ ದಿನಾಚರಣೆ ಅಂಗವಾಗಿ, ಭಾರತೀಯ ವೈದ್ಯ ಸಂಘ ದಕ್ಷಿಣ ಕನ್ನಡ ಘಟಕವು ಏರ್ಪಡಿಸಿದ ಸಮಾರಂಭದಲ್ಲಿ ಹಿರಿಯ ವೈದ್ಯರಾಗಿರುವ, ಸಂಘದ ನಿರ್ದೇಶಕ ಡಾ| ಸುಭಾಶ್ಚಂದ್ರ ಶೆಟ್ಟಿಯವರನ್ನು ಸನ್ಮಾನಿಸ ಲಾಯಿತು. ಅವರಿಗೆ ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ಹಾಗೂ ಆಡಳಿತ ಮಂಡಳಿಯು ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

## ಮೂಡಬಿದ್ರೆ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾಗಿ ಶ್ರೀ ವಿಠಲ ಪಿ. ಶೆಟ್ಟಿ ಆಯ್ಕೆ



ಡಾ| ಸುಧಾಕರ ಶೆಟ್ಟಿಯವರು ಬಿ.ಸಿ.ರೋಡ್ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆ ಯಲ್ಲಿ, ಮೂಡಬಿದ್ರೆ ಶಾಖೆಯ ಉಸ್ತುವಾರಿ ನಿರ್ದೇಶಕರಾದ ಶ್ರೀ ವಿಠಲ ಪಿ. ಶೆಟ್ಟಿ ಯವರನ್ನು ಶಾಖಾ ಸಲಹಾ ಸಮಿತಿಯ ಅಧ್ಯಕ್ಷರಾಗಿ ಆಡಳಿತ ಮಂಡಳಿಯು ನಾಮ ನಿರ್ದೇಶನ ಮಾಡಿದೆ.

## ಎರಡು ಹೊಸ ಶಾಖೆ ಆರಂಭಿಸಲು ಇಲಾಖಾನುಮತಿ

ಸಂಘದ ಪ್ರಸ್ತಾವನೆಯನ್ನು ಪರಿಗಣಿಸಿ ದ.ಕ.ಜಿಲ್ಲೆಯ ತೊಕ್ಕೊಟ್ಟು ಮತ್ತು ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ ಶಾಖೆಗಳನ್ನು ಆರಂಭಿಸಲು ಇದೀಗ ಇಲಾಖಾನುಮತಿಯು ಲಭಿಸಿದೆ. ಶಾಖೆಯನ್ನು ತೆರೆಯಲು ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.

## ಸಂಘದ ನಿಧಿಯಿಂದ ಯಶಸ್ವಿನಿ ಶುಲ್ಕ ಭರಿಕೆ

2015-16ನೇ ಸಾಲಿನಲ್ಲಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ ನೋಂದಾಯಿಸಿಕೊಂಡ ಫಲಾನುಭವಿಗಳ ಶುಲ್ಕದಲ್ಲಿ ಸ್ವಲ್ಪಾಂಶವನ್ನು ಸಂಘದ ಸಾರ್ವಜನಿಕ ಉಪಕಾರ ನಿಧಿಯಿಂದ ಭರಿಸಲು ರೂ.75,000/-ವನ್ನು ಆಡಳಿತ ಮಂಡಳಿಯು ಮಂಜೂರು ಮಾಡಿದೆ.

## ಹುಟ್ಟು ಹಬ್ಬದ ಶುಭಾಶಯಗಳು

ಶ್ರೀ ಕೆ. ಜೈರಾಜ್ ಬಿ. ರೈ, ಅಧ್ಯಕ್ಷರು

ಶ್ರೀ ಪಿ.ಶಿವರಾಮ ಅಡ್ಯಂತಾಯ, ನಿರ್ದೇಶಕರು

ಸಿಬ್ಬಂದಿಗಳ ಹೆಸರು ಮತ್ತು ಶಾಖೆ

| | |
|---|---|
| ಶ್ರೀ ವಿನಯ ಕುಮಾರ್ ಶೆಟ್ಟಿ, ಸುರತ್ಕಲ್ | ಶ್ರೀ ರೋಹಿತ್ ಎಂ.ಜೆ., ಸುಳ್ಯ |
| ಶ್ರೀಮತಿ ವೀಣಾ ಶೆಟ್ಟಿ, ವಿಟ್ಲ | ಶ್ರೀ ಹರೀಶ್, ಕೇಂದ್ರ ಕಚೇರಿ |
| ಶ್ರೀ ಗೋಪಾಲಕೃಷ್ಣ ಶೆಟ್ಟಿ, ಕಾರ್ಕಳ | ಶ್ರೀಮತಿ ಹರಿಣಿ ರೈ ಬಿ, .ಸುಳ್ಯ |
| ಶ್ರೀ ಧನಂಜಯ ಶೆಟ್ಟಿಗಾರ್, ಕುಂದಾಪುರ | ಶ್ರೀ ಪಾಂಡುರಂಗ ನ್ಯಾಕ್, ಹೆಬ್ರಿ |
| ಶ್ರೀಮತಿ ಲಕ್ಷಣಾ ಶೆಟ್ಟಿ, ಚಿಲಿಂಬಿ | |

2016ರ ಜನವರಿಯಿಂದ ಮಾರ್ಚ್ ತಿಂಗಳ ಅವಧಿಯಲ್ಲಿ ಜನ್ಮದಿನವನ್ನು ಆಚರಿಸುವ ತಮಗೆಲ್ಲರಿಗೂ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು

## ಅಭಿನಂದನೆಗಳು

* ಸಂಘದ ಕಾರ್ಕಳ ಶಾಖೆಯ ಅಕೌಂಟೆಂಟ್ ಶ್ರೀ ಗೋಪಾಲಕೃಷ್ಣ ಶೆಟ್ಟಿಯವರು ಹೆಣ್ಣು ಮಗುವಿನ ತಂದೆಯಾಗಿರುವರು.
* ಕುಂದಾಪುರ ಶಾಖೆಯ ಶ್ರೀ ರಾಮಕೃಷ್ಣ ನಿತ್ಯನಿಧಿ ಸಂಗ್ರಾಹಕರಾದ ಶ್ರೀ ರಾಜು ಪೂಜಾರಿಯವರು ಗಂಡು ಮಗುವಿನ ತಂದೆಯಾಗಿರುವರು.
* ಉಪ್ಪಿನಂಗಡಿ ಶಾಖೆಯ ಅಟೆಂಡರ್ ಶ್ರೀಮತಿ ಉಷಾ ಬಿ.ಯವರು ಹೆಣ್ಣು ಮಗುವಿನ ತಾಯಿಯಾಗಿರುವರು.

ಇವರೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು.

## ವಿವಾಹ ನಿಶ್ಚಿತಾರ್ಥ

ಸಂಘದ ಉಡುಪಿ ಶಾಖೆಯ ಅಕೌಂಟೆಂಟ್ ಶ್ರೀ ಮಿಥುನ್‌ಚಂದ್ರರವರ ವಿವಾಹ ನಿಶ್ಚಿತಾರ್ಥ ಕು. ರಕ್ಷಿತಾ ರವರೊಂದಿಗೆ ಜರಗಿತು. ಇವರಿಗೆ ಹಾರ್ದಿಕ ಅಭಿನಂದನೆಗಳು

## ಗೃಹ ಪ್ರವೇಶ

ಪುತ್ತೂರು ಶಾಖೆಯ ಅಕೌಂಟೆಂಟ್‌ರಾದ ಶ್ರೀ ಬಾಲಕೃಷ್ಣ ರೈಯವರ ನೂತನ ಮನೆ 'ಹಿತೈಷಿ' ಇದರ ಗೃಹ ಪ್ರವೇಶ ಇತ್ತೀಚೆಗೆ ಜರಗಿತು. ಇವರಿಗೆ ಹಾರ್ದಿಕ ಅಭಿನಂದನೆಗಳು

## ವಿವಾಹ

ಸಂಘದ ಕೇಂದ್ರ ಕಛೇರಿ ಅಟೆಂಡರ್ ಶ್ರೀ ಹರೀಶ್‌ರವರ ವಿವಾಹ ಚಿ.ಸೌ. ಉಮಾರವರೊಂದಿಗೆ ಇತ್ತೀಚೆಗೆ ಜರಗಿತು. ನವದಂಪತಿಗಳಿಗೆ ಹಾರ್ದಿಕ ಅಭಿನಂದನೆಗಳು.

# ವಿವಿಧ ಶಾಖೆಗಳಲ್ಲಿ ಗಣಕೀಕೃತ ಉಳಿತಾಯ ಖಾತೆ ಪಾಸ್‌ಬುಕ್ ಪ್ರಿಂಟರ್ ಸೌಲಭ್ಯಕ್ಕೆ ಚಾಲನೆ

## ಹೆಬ್ರಿ ಶಾಖೆ



ಸಂಘದ ಹೆಬ್ರಿ ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್ ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಸದಸ್ಯ ಶ್ರೀ ನೀರೆ ಕೃಷ್ಣ ಶೆಟ್ಟಿಯವರು ಉದ್ಘಾಟಿಸಿದರು.

## ಬಿ.ಸಿ.ರೋಡ್ ಶಾಖೆ



ಸಂಘದ ಬಿ.ಸಿ.ರೋಡ್ ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್‌ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಉಸ್ತುವಾರಿ ನಿರ್ದೇಶಕ ಡಾ। ಸುಧಾಕರ ಶೆಟ್ಟಿಯವರು ಉದ್ಘಾಟಿಸಿದರು.

## ಬೈಂದೂರು ಶಾಖೆ



ಸಂಘದ ಬೈಂದೂರು ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್‌ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಅಧ್ಯಕ್ಷ ಶ್ರೀ ಬಿ. ಜಗನ್ನಾಥ ಶೆಟ್ಟಿಯವರು ಉದ್ಘಾಟಿಸಿದರು.

## ಕಾರ್ಕಳ ಶಾಖೆ



ಸಂಘದ ಕಾರ್ಕಳ ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್ ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಅಧ್ಯಕ್ಷ ಶ್ರೀ ಶಿವರಾಮ ಶೆಟ್ಟಿಯವರು ಉದ್ಘಾಟಿಸಿದರು.

## ಉಡುಪಿ ಶಾಖೆ



ಸಂಘದ ಉಡುಪಿ ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್‌ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಸದಸ್ಯ ಶ್ರೀ ಪುರುಷೋತ್ತಮ ಶೆಟ್ಟಿಯವರು ಉದ್ಘಾಟಿಸಿದರು.

## ಮೂಡಬಿದ್ರಿ ಶಾಖೆ



ಸಂಘದ ಮೂಡಬಿದ್ರಿ ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್‌ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಉಸ್ತುವಾರಿ ನಿರ್ದೇಶಕರಾದ ಶ್ರೀ ವಿಠಲ ಪಿ. ಶೆಟ್ಟಿಯವರು ಉದ್ಘಾಟಿಸಿದರು.

## ಉಪ್ಪಿನಂಗಡಿ ಶಾಖೆ



ಸಂಘದ ಉಪ್ಪಿನಂಗಡಿ ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್ ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಉಸ್ತುವಾರಿ ನಿರ್ದೇಶಕ ಶ್ರೀ ಪ್ರಸಾದ್ ಕೌಶಲ್ ಶೆಟ್ಟಿಯವರು ಉದ್ಘಾಟಿಸಿದರು.

## ವಿಟ್ಲ ಶಾಖೆ



ಸಂಘದ ವಿಟ್ಲ ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್ ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಅಧ್ಯಕ್ಷ ಶ್ರೀ ರಮಾನಂದ ಶೆಟ್ಟಿಯವರು ಉದ್ಘಾಟಿಸಿದರು.

## ಪುತ್ತೂರು ಶಾಖೆ



ಸಂಘದ ಪುತ್ತೂರು ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್ ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಅಧ್ಯಕ್ಷ ಶ್ರೀ ಚಿಕ್ಕಪ್ಪ ನ್ಯಾಕ್‌ರವರು ಉದ್ಘಾಟಿಸಿದರು

## ವೆಲೆನ್ಸಿಯಾ ಶಾಖೆ



ಸಂಘದ ವೆಲೆನ್ಸಿಯಾ ಶಾಖೆಯಲ್ಲಿ ಉಳಿತಾಯ ಖಾತೆಯ ಗಣಕೀಕೃತ ಪಾಸ್‌ಪುಸ್ತಕ ಮುದ್ರಣ ಸೌಲಭ್ಯವನ್ನು ಶಾಖಾ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಉಸ್ತುವಾರಿ ನಿರ್ದೇಶಕರಾದ ಶ್ರೀ ಎಂ. ರಾಮಯ ಶೆಟ್ಟಿಯವರು ಉದ್ಘಾಟಿಸಿದರು.

## ಸಿಬ್ಬಂದಿ ಶ್ರೀ ಪ್ರವೀಣ್ ರೈಯವರಿಗೆ ಧನ ಸಹಾಯ

ತೀವ್ರ ಅಸೌಖ್ಯದಿಂದ ಬಳಲುತ್ತಿರುವ ಉಪ್ಪಿನಂಗಡಿ ಶಾಖೆಯ ಅಕೌಂಟೆಂಟ್ ಶ್ರೀ ಪ್ರವೀಣ್ ರೈಯವರಿಗೆ ಸಂಘದ ಸಿಬ್ಬಂದಿ ಕಲ್ಯಾಣ ನಿಧಿಯಿಂದ ವೈದ್ಯಕೀಯ ಧನ ಸಹಾಯವಾಗಿ ರೂ. 1,00,000ವನ್ನು ಮಂಜೂರು ಮಾಡಲಾಗಿದೆ. ಶ್ರೀ ಪ್ರವೀಣ್ ರೈಯವರು ಶೀಘ್ರ ಸಂಪೂರ್ಣ ಗುಣಮುಖರಾಗಲೆಂದು ಹಾರೈಸುತ್ತೇವೆ.

## ಸಹಕಾರ ಶಿಕ್ಷಣ ನಿಧಿ ಮಹಾಮಂಡಳಕ್ಕೆ ಪಾವತಿ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು ಇವರಿಗೆ ಪಾವತಿಸಲಾಗುವ 2014–15ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ರೂ. 422085/–ರ ಚೆಕ್ಕನ್ನು ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈ ಯವರು ದ.ಕ. ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷ ಶ್ರೀ ಹರೀಶ್ ಆಚಾರ್ ಇವರಿಗೆ ದಿನಾಂಕ 3–10–15 ರಂದು ಹಸ್ತಾಂತರಿಸಿದರು. ಯೂನಿಯನ್ ಸಿಇಓ ಶ್ರೀಮತಿ ಸಾವಿತ್ರಿ ರೈ ಹಾಗೂ ಸಂಘದ ಪ್ರಭಾರ ಮಹಾ ಪ್ರಬಂಧಕ ಶ್ರೀ ಗಣೇಶ್ ಜಿ.ಕೆ.ಯವರು ಉಪಸ್ಥಿತರಿದ್ದರು.

## ಈ ತ್ರೈಮಾಸಿಕ ಅವಧಿಯಲ್ಲಿ ನೀಡಲಾದ ಸೌಲಭ್ಯಗಳು

- ☆ ಸಂಘದ ಎಲ್ಲಾ ಶಾಖೆಗಳಿಗೆ ಗಣಕೀಕೃತ ಉಳಿತಾಯ ಖಾತೆ ಪಾಸ್‌ಬುಕ್ ಪ್ರಿಂಟರ್ ಅಳವಡಿಸಲಾಗಿದೆ.
- ☆ ಸಂಘದ ಸಿಬ್ಬಂದಿಗಳ ಮೆಡಿಕ್ಲೈಮ್ ವಿಮಾ ಮಿತಿಯನ್ನು ರೂ. 50,000ದಿಂದ ರೂ.1 ಲಕ್ಷಕ್ಕೆ ಹೆಚ್ಚಿಸಲಾಗಿದೆ.

### ಸಂಘದ ಡಿಸೆಂಬರ್ 2015ರ ಪ್ರಗತಿ ವಿವರ

| ಕ್ರ.ಸಂ. | ವಿವರ | 31.12.2015ಕ್ಕೆ ಇದ್ದಂತೆ |
|---|---|---|
| 1 | ಠೇವಣಾತಿಗಳು | ರೂ. 124.42 ಕೋಟಿ |
| 2 | ಸಾಲ ಮತ್ತು ಮುಂಗಡ | ರೂ. 87.68 ಕೋಟಿ |
| | ಒಟ್ಟು ಅನುತ್ಪಾದಕ ಆಸ್ತಿ | |
| 3 | 1) ಮೊಬಲಗು | ರೂ. 24.60 ಲಕ್ಷ |
| | 2) ಶೇಕಡ | 0.28 % |
| 4 | ನಿವ್ವಳ ಅನುತ್ಪಾದಕ ಆಸ್ತಿ | NIL |
| 5 | ನಿವ್ವಳ ಲಾಭ | ರೂ. 2.21 ಕೋಟಿ |
| 6 | ಒಟ್ಟು ವ್ಯವಹಾರ | ರೂ. 212.10 ಕೋಟಿ |

## ಸಂಘದ ಮಾಜಿ ಉಪಾಧ್ಯಕ್ಷ ದಿ॥ ಡಾ. ಎಚ್.ಪಿ.ಸಿ. ಶೆಟ್ಟಿಯವರಿಗೆ ಶ್ರದ್ಧಾಂಜಲಿ



ನಮ್ಮ ಸಂಘದ ಮಾಜಿ ಉಪಾಧ್ಯಕ್ಷರು ಹಾಗೂ ನಿರ್ದೇಶಕರಾಗಿದ್ದ ಡಾ। ಎಚ್.ಪಿ.ಸಿ. ಶೆಟ್ಟಿಯವರು ಇತ್ತೀಚೆಗೆ ನಿಧನರಾದರು. ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು, ಡಾ। ಎಚ್.ಪಿ. ಸಿ. ಶೆಟ್ಟಿಯವರ ನಿಧನಕ್ಕೆ, ತೀವ್ರ ಸಂತಾಪ ವ್ಯಕ್ತಪಡಿಸಿ, ಅವರು ಸಂಘಕ್ಕೆ ಸಲ್ಲಿಸಿದ ಅನುಪಮ ಸೇವೆಯುನ್ನು ಸ್ಮರಿಸಿದರು. ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರಿ ಮೌನ ಪ್ರಾರ್ಥನೆ ಮಾಡಿ ಸಂಘದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

## ಮೂಡಬಿದ್ರಿ ಶಾಖಾ ಸಲಹಾ ಸಮಿತಿ ಸದಸ್ಯ ದಿ॥ ಚಂದ್ರಶೇಖರ್ ಶೆಟ್ಟಿಯವರಿಗೆ ಶ್ರದ್ಧಾಂಜಲಿ

ಸಂಘದ ಮೂಡಬಿದ್ರಿ ಶಾಖಾ ಸಲಹಾ ಸಮಿತಿ ಸದಸ್ಯರಾಗಿ ಶಾಖೆಯ ಪ್ರಗತಿಗೆ ತಮ್ಮದೇ ಆದ ಕೊಡುಗೆ ನೀಡಿದ ಹಿರಿಯ ಸದಸ್ಯರಾದ ಶ್ರೀ ಚಂದ್ರಶೇಖರ್ ಶೆಟ್ಟಿಯವರು ಇತ್ತೀಚೆಗೆ ನಿಧನರಾದರು. ಅವರ ನಿಧನಕ್ಕೆ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು, ಆಡಳಿತ ಮಂಡಳಿ ನಿರ್ದೇಶಕರುಗಳು ಹಾಗೂ ಮೂಡಬಿದ್ರಿ ಶಾಖಾ ಸಲಹಾ ಸಮಿತಿಯು ತೀವ್ರ ಸಂತಾಪ ವ್ಯಕ್ತಪಡಿಸಿ, ಸಂಘದ ವತಿಯಿಂದ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

## ಶ್ರದ್ಧಾಂಜಲಿ

ಸಂಘದ ಹೆಬ್ರಿ ಶಾಖೆಯ ಕ್ಲರ್ಕ್ ಕು.ಜಯಲಕ್ಷ್ಮಿಯವರ ತಾಯಿ ಶ್ರೀಮತಿ ಶಾಂತಾರವರು ಇತ್ತೀಚೆಗೆ ನಿಧನರಾಗಿದ್ದು ಇವರ ನಿಧನಕ್ಕೆ ತೀವ್ರಸಂತಾಪ ವ್ಯಕ್ತಪಡಿಸುತ್ತಾ ಸಂಘದ ವತಿಯಿಂದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

## ಮುಂದಿನ ಕಾರ್ಯಕ್ರಮ

- ಮಂಗಳೂರು, ಸುಳ್ಯ, ಕುಂದಾಪುರ ಮತ್ತು ಉಡುಪಿ ಶಾಖೆಗಳಲ್ಲಿ ಇ–ಸ್ಟಾಂಪಿಂಗ್ ಉಪಕೇಂದ್ರವನ್ನು ತೆರೆಯುವುದು.
- ಎರಡು ಹೊಸ ಶಾಖೆಗಳನ್ನು ತೊಕ್ಕೊಟ್ಟು ಮತ್ತು ಬ್ರಹ್ಮಾವರದಲ್ಲಿ ತೆರೆಯುವುದು.
- ಸಂಘದ ಕಂಪ್ಯೂಟರ್ ಡಾಟಾಗಳ ಹೆಚ್ಚಿನ ಸುರಕ್ಷತೆಗಾಗಿ UTM (VPN/FIREWAL) ಸಿಸ್ಟಂನ್ನು ಅಳವಡಿಸುವುದು.

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.